## 2

# ಅಬ್ರಹಾಮ - ರಕ್ಷಣೆಯ ಆರಂಭ

## (ಆದಿಕಾಂಡ 12 ಮತ್ತು 15)

"ಒಂದು ವಿಚಾರದ ಬಗ್ಗೆ ಎಂದಿಗೂ ಕೀಳರಿಮೆ ಮಾಡದಿರು ಎಂಬ" ಹೇಳಿಕೆಯು ಇರುತ್ತದೆ. ಸತ್ಯವೇದದ ವಿವರಣೆಯ ಕುರಿತು ಇದು ಸತ್ಯ ಸಂಗತಿಯಾಗಿರುತ್ತದೆ, ಏಕೆಂದರೆ, ದೇವರು ಪ್ರತಿಯೊಬ್ಬನನ್ನು ಪ್ರಮುಖನೆಂದು ಪರಿಗಣಿಸುವನು. ಆದಾಮ, ಎಂಬ ಒಬ್ಬ ಮನುಷ್ಯನನ್ನು ಸೃಷ್ಟಿಸುವ ಮೂಲಕ ಮಾನವ ಸೃಷ್ಟಿಯು ಉಂಟಾಯಿತು. ಮುಂದೆ ಆದಿಕಾಂಡ 6ರಲ್ಲಿ ಮಾನವರೆಲ್ಲರ ಸಂರಕ್ಷಣೆಯು ಒಬ್ಬ ಮನುಷ್ಯನಾದ ನೋಹನ ಮೇಲೆ ಅವಲಂಭಿಸಿತ್ತು ಎಂದು ಗಮನಿಸುತ್ತೇವೆ. ಐಗುಪ್ತದಲ್ಲಿ ದಾಸತ್ವದಲ್ಲಿದ್ದ ಇಸ್ರಾಯೇಲ್ಯರನ್ನು ಒಬ್ಬ ಮನುಷ್ಯನಾದ ಮೋಶೆಯ ಮೂಲಕ ವಿಮೋಚಿಸಲಾಯಿತು. ಅಂತಿಮವಾಗಿ, ಇಸ್ರಾಯೇಲ್ಯರ ಮೆಸ್ಸೀಯನು ಹಾಗೂ ರಕ್ಷಕನ ಜನನವು ಒಬ್ಬ ಸ್ತ್ರೀಯ ಮೂಲಕವಾಗಿ ಸಾಧಿಸಲಾಯಿತು (ಆಕೆಯು ಯೌವನಾವಸ್ಥೆಯಲ್ಲಿದ್ದಳು).

ಹೀಗಿರುವದರಿಂದ, ಪಾಪದ ಸಮಸ್ಯೆಯಿಂದ ಪರಿಹಾರದ ಕಾರ್ಯವನ್ನು (ಆದಿಕಾಂಡ 3ರಲ್ಲಿ ಉಂಟಾದ ಸಮಸ್ಯೆಯ ನಿಮಿತ್ತ) ಆರಂಭ ಮಾಡಲು ಒಬ್ಬ ಮನುಷ್ಯನನ್ನೇ ದೇವರು ಉಪಯೋಗಿಸಿದನು. ಅವನು ಅಬ್ರಹಾಮನೇ, ಆ ಸಮಯದಲ್ಲಿ ಅವನನ್ನು "ಅಬ್ರಾಮ" ಎಂದು ಕರೆಯುತ್ತಿದ್ದರು.

ಆದಿಕಾಂಡ 1-3ರಲ್ಲಿ ಸೃಷ್ಟಿಯ ಹಾಗೂ ಪಾಪದ ಮೂಲವನ್ನು ದಾಖಲುಮಾಡಲಾಗಿದೆ. ಅಧ್ಯಾಯ 4 ರಿಂದ 11ರಲ್ಲಿ ಅದಾಮ ಹವ್ವರನ್ನು ತೋಟದಿಂದ ಹೊರಹಾಕಿದ ನಂತರ, ಸಮಸ್ಯೆಗಳು ಉಲ್ಬಣವಾಯಿತು. ಆದ್ದರಿಂದ, ದೇವರು ತನ್ನ ಸೃಷ್ಟಿಯನ್ನು ತನ್ನ ಚಿತ್ತಕ್ಕೆ ಒಳಪಡುವಂಥ ದೀರ್ಘಕಾಲದ ಯೋಜನೆಯನ್ನು ಅಬ್ರಹಾಮನನ್ನು ಕರೆಯುವದರ ಮೂಲಕ ಮಾಡಿದನು. ಆದಿಕಾಂಡ 12 ಮತ್ತು 15ರಲ್ಲಿ ಈ ಕರೆಯನ್ನು ಗಮನಿಸುತ್ತೇವೆ.

ಇಸ್ರಾಯೇಲ್ಯರ ಮೂವರು "ಶ್ರೇಷ್ಟವಾದ ಮೂಲ ಪಿತೃಗಳಲ್ಲಿ" ಅಬ್ರಹಾಮನು ಮೊದಲಿಗನು. ನಂತರದಲ್ಲಿ ಇಸಾಕ, ಯಾಕೋಬರನ್ನು ಕಾಣುತ್ತೇವೆ. ಕ್ರಿ.ಪೂ. 2100-1700 ರ ಅವಧಿಯಲ್ಲಿ ಅವರು ಜೀವಿಸಿದ್ದರು.

ಅಬ್ರಹಾಮನ ಮೊಮ್ಮಗನಾದ ಯಾಕೋಬನು ಹನ್ನೆರಡು ಮಕ್ಕಳನ್ನು ಪಡೆದಿದ್ದನು ಅವರುಗಳು "ಇಸ್ರಾಯೇಲ್" ಎಂಬ ಹನ್ನೆರಡು ಕುಲಗಳಿಗೆ ಮೂಲಪುರುಷರಾದರು ("ಇಸ್ರಾಯೇಲ್" ಎಂಬುದು ಯಾಕೋಬನ ಮತ್ತೊಂದು ಹೆಸರು ಆದಿಕಾಂಡ 32:28). ಈ ಇಸ್ರಾಯೇಲ್ಯರ ಮೂಲದಿಂದ (ಯೂದ ಕುಲದಿಂದ) ಯೇಸು ಎಂಬ ಮೆಸ್ಸೀಯನು ಜನಿಸಿದನು ಪಾಪದ ಪರಿಹಾರಕ್ಕೆ ಆತನೇ ಉತ್ತರವಾಗಿದ್ದನು. ಈ ಒಬ್ಬ ಮನುಷ್ಯನನ್ನು ಕರೆ ಯುವದರ ಮೂಲಕವಾಗಿಯೂ, ಅವನ ನಂಬಿಕೆಯ ಮೂಲಕ ವಾಗಿಯೂ ಈ ವಿಚಾರವು ಕಾರ್ಯಗತವಾಯಿತು.

12:1-4ರಲ್ಲಿ ದೇವರು ಅಬ್ರಹಾಮನನ್ನು ಮೊದಲಿಗೆ ಸಂಧಿಸಿದನು. ಅವನೊಂದಿಗೆ ಪ್ರಥಮವಾಗಿ ಒಡಂಬಡಿಕೆಯನ್ನು ಮಾಡಿಕೊಂಡನು. ಈ ಒಡಂಬಡಿಕೆಯ ವಾಗ್ದಾನಗಳನ್ನು ಆದಿಕಾಂಡ 15:1-6ರಲ್ಲಿ ಪುನಃ ವ್ಯಾಖ್ಯಾನಿಸಲಾಗಿದೆ. ಈ ಎರಡು ವಾಕ್ಯ ಭಾಗಗಳನ್ನು ಪರಿ ಶೀಲನೆ ಮಾಡಿದರೆ ಮುಂದೆ ಬರುವದಕ್ಕಿದ್ದ ರಕ್ಷಣೆಯು ತತ್ವವನ್ನು ಗ್ರಹಿಸುತ್ತೇವೆ.

## ದೇವರ ಯೋಜನೆಗೆ ಅನುಗುಣವಾದ ರಕ್ಷಣೆಯಾಗಿರುತ್ತದೆ

ಮನುಷ್ಯನು ಮುಂದಾಗುವದರಿಂದಲೂ ಅಥವಾ ಅವನ ಪ್ರಯತ್ನದಿಂದಲೂ ರಕ್ಷಣೆಯು ಲಭಿಸುವದಿಲ್ಲವೆಂದು ಅಬ್ರಹಾಮನೊಂದಿಗಿನ ದೇವರ ಒಡಂಬಡಿಕೆಯು ಸ್ಪಷ್ಟ ಪಡಿಸುತ್ತದೆ. ಸೃಷ್ಟಿಯ ಕಾರ್ಯದಲ್ಲಿ, ಸಂಪೂರ್ಣ ಹೊಣೆಯನ್ನು ದೇವರೇ ವಹಿಸಿರುವಂತೆ, ಮಾನವನ ಸೃಷ್ಟಿಯಲ್ಲಿಯೂ ದೇವರೇ ಮುತುವರ್ಜಿಯನ್ನು ವಹಿಸಿರುವನು. ಈ ಪ್ರಗತಿಯನ್ನು "ಆಯ್ಕೆಯ ಪ್ರಕ್ರಿಯೆ" ಎನ್ನುವರು. ದೇವರು ತನ್ನ ಚಿತ್ತವನ್ನು ನೆರವೇರಿಸುವದಕ್ಕಾಗಿ, ಅಬ್ರಹಾಮನನ್ನು ಹಾಗೂ ಅವನ ವಂಶದವರನ್ನು ಆಯ್ಕೆ ಮಾಡಿಕೊಂಡನು. ಈ ಆಯ್ಕೆಯ ಪ್ರತಿಕ್ರಿಯೆಯು ಅಬ್ರಹಾಮನ ಸಾಮರ್ಥ್ಯ ಹಾಗೂ ಪರಿಪೂರ್ಣತೆಯನ್ನು ಅವಲಂಬಿಸಿರಲಿಲ್ಲ, ಕೆಲವು ಯೆಹೂದ್ಯ ಸಂಪ್ರದಾಯ ಗಳು ಇದನ್ನೇ ಪ್ರತಿಪಾದಿಸುತ್ತವೆ. ಒಬ್ಬನು ಆದಿಕಾಂಡ 16-25ನ್ನು ಓದುವದಾದರೆ ಇಲ್ಲಿ ಅಬ್ರಹಾಮನು ಪಾಪರಹಿತನಾಗಿರಲಿಲ್ಲ ಎಂದು ತಿಳಿಯಲು ಸಾಧ್ಯವಿದೆ. ಅವನು ಸುಳ್ಳಾಡಿದನು, ನಂಬಿಕೆಯಲ್ಲಿ ಅಭದ್ರವಾಗಿದ್ದು, ಕುಟುಂಬದಲ್ಲಿ ಯೋಗ್ಯವಾದ ವ್ಯವಸ್ಥೆಯನ್ನು ಹೊಂದಿರಲಿಲ್ಲ. ಇಲ್ಲಿ, ದೇವರು ಅಬ್ರಹಾಮನ ಒಳ್ಳೇಯತನವನ್ನು ನೋಡದೆ, ತನ್ನ ಕೃಪೆಯಿಂದಲೇ ಅವನನ್ನು ಆಯ್ದುಕೊಂಡನು.

ಆದಿಕಾಂಡ 12:2, 3ರಲ್ಲಿ, ದೇವರು ತನ್ನ ಯೋಜನೆಯ ವಿಸ್ತಾರವಾದ ಚಿತ್ರಣವನ್ನು ನೀಡಿರುವನು. ಅಬ್ರಹಾಮನ ಮೂಲಕ ಒಂದು ಶ್ರೇಷ್ಟವಾದ ಜನಾಂಗವು ಉಂಟಾಗುವದು, ಆ ಜನಾಂಗದವರಿಂದ ಲೋಕದವರಿಗೆಲ್ಲಾ ಆಶೀರ್ವಾದ ಉಂಟಾಗುವದು. ಕೆಲವು ಸತ್ಯವೇದದ ತರ್ಜುಮೆಗಳಲ್ಲಿ 3ನೇ ವಚನದ ಅಂತ್ಯಭಾಗವನ್ನು: "ನಿನ್ನ ಮೂಲಕವಾಗಿ, ಲೋಕದ ಸಕಲ ಕುಟುಂಬಗಳು, ತಮ್ಮನ್ನು ತಾವೇ ಆಶೀರ್ವದಿಸಿಕೊಳ್ಳುವರು" ಎಂದಿದೆ (RSV). ESV ಯಲ್ಲಿ "ಲೋಕದಲ್ಲಿರುವ ನಿಮ್ಮೆಲ್ಲರ ಕುಟುಂಬಗಳಿಗೆ ಆಶೀರ್ವಾದವಾಗುವದು" ಎಂಬುದಾಗಿದೆ. ಮೊದಲನೆಯದಾಗಿ ಓದಿದಂತೆ ಭವಿಷ್ಯದ ಜನಾಂಗವು ಆಶೀರ್ವಾದವನ್ನು ಅಬ್ರಹಾಮನ ಹೆಸರಿನಿಂದಲೇ ಹೊಂದುವದಕ್ಕೆ ಸಾಧ್ಯವಿತ್ತು (ಇಸ್ರಾಯೇಲ್ಯರನ್ನು ಹೊರತುಪಡಿಸಿ ಇತರ ಜನಾಂಗಗಳು ಸಹ) ಎಡನೆಯ ಓದಿನಲ್ಲಿ, ಅಂತಿಮವಾಗಿಯೂ ಸಕಲ ಜನಾಂಗಗಳು ಅಬ್ರಹಾಮನಿಂದಲೇ ಆಶೀರ್ವದಿಸಲ್ಪಡುವದು; ಅದು ಲೋಕದ ರಕ್ಷಕನಾದ ಯೇಸುವಿನಿಂದಲೇ, ಏಕೆಂದರೆ ಆತನೇ ಅಬ್ರಹಾಮನ ವಂಶದವನಾಗಿರುವನು. ಎರಡು ತರ್ಜುಮೆಯಲ್ಲೂ ಇರುವ ವ್ಯಾಕರಣವು ಬಹುಶಃ ಸರಿಯಾಗಿಯೇ ಇರಬಹುದು, ಆದರೆ ನಂತರದ ಹೇಳಿಕೆಯ ಪ್ರೇರಿತ ಬರವಣಿಗೆಗಾರನ ಮೂಲಕ ಸತ್ಯವಾಗಿದೆ, ಏಕೆಂದರೆ ಸತ್ಯವೇದದ ಮುಂದಿನ ಬರವಣಿಗೆಗಳು ಇದನ್ನೇ ಊರ್ಜಿತಗೊಳಿಸಿರುತ್ತದೆ. ಈ ಎರಡು ಹೇಳಿಕೆಯ ಪ್ರಕಾರ ಅಬ್ರಹಾಮನ ಮೂಲಕ ತನ್ನ ಯೋಜನೆಯನ್ನು ಸಾಧ್ಯಮಾಡಲು ದೇವರು ಮುಂದಾದನು ಅವನ ಮೂಲಕ ಲೋಕವನ್ನು ಆಶೀರ್ವದಿಸಿದನು. ನಮ್ಮ ಪಾಪಗಳಿಗಾಗಿ ಇಳಿದು ಬಂದು, ಶಿಲುಬೆಯ ಮೇಲೆ ಮರಣವನ್ನು ಹೊಂದಿ, ಮರಣದಿಂದ ಎದ್ದು ಬಂದ ಯೇಸುವಿನಲ್ಲಿ ಇವೆಲ್ಲವುಗಳು ನೇರವೇರಿವೆ.

1 ಕೊರಿಂಥ 15:20-28ರಲ್ಲಿ ದೇವರ ಯೋಜನೆಯ ಕುರಿತು ಪೌಲನು ಇಲ್ಲಿ, "ಎಲ್ಲವನ್ನು ದೇವರು ಆತನಿಗೆ ಒಳಪಡಿಸಿರುತ್ತಾನೆ" ಎಂಬುದರಲ್ಲಿ ಅಡಕವಾಗಿದೆ. 1 ಕೊರಿಂಥ 15:42-50 ರಲ್ಲಿ, ಈ ಸತ್ಯಕ್ಕೆ ಒತ್ತನ್ನು ನೀಡಲಾಗಿದೆ. ಈ ಭಾಗದಲ್ಲಿ ಯೇಸುವನ್ನು "ಕಡೆಯ ಆದಾಮನು" ಎಂದು ವ್ಯಾಖ್ಯಾನಿಸಲಾಗಿದೆ. "ಮೊದಲ ಮನುಷ್ಯನ" ಪಾಪದ ನಿವಾರಣೆಗಾಗಿ ಆತನು ಬಂದನು. ಅದೇ ರೀತಿಯಲ್ಲಿ, ಪ್ರಕಟನೆ 22:1-5, ಪಾಪಕ್ಕೆ ಒಳಗಾದ ಪರಿಣಾಮವು ತಿರುವನ್ನು ಪಡೆದು ನಿತ್ಯತ್ವವನ್ನು ತೋರುತ್ತದೆ. ಪರಲೋಕವನ್ನು ಒಂದು ತೋಟಕ್ಕೆ ಹೋಲಿಸಿ, ಜೀವ ವೃಕ್ಷಕ್ಕೆ ಹೋಗುವ ದಾರಿಯನ್ನು ಸುಗಮ ಮಾಡಲಾಗಿದೆ.

ವೇದ ಶಾಸ್ತ್ರದ ಪ್ರಕಾರ ಸಮಯವನ್ನು ನೇರವಾಗಿ ವೀಕ್ಷಿಸಲಾಗಿದೆ. ಅಂದರೆ ಆ ಸಮಯಕ್ಕೆ ಒಂದು ಆರಂಭವಿತ್ತು (ಸೃಷ್ಟಿಸಿದ ಸಮಯ) ಹಾಗೆಯೇ ನಿಶ್ಚಯವಾಗಿಯೂ

ಅದಕ್ಕೆ ಒಂದು ಅಂತ್ಯವಿದೆ (ಯೇಸು ಹಿಂತಿರುಗುವಾಗ) ಅನೇಕ ಧರ್ಮಗಳು ಸಮಯವನ್ನು ವೃತ್ತಾಕಾರದಲ್ಲಿ ವೀಕ್ಷಿಸುತ್ತಾರೆ. ಈ ಪ್ರಸ್ತಾಪದ ಪ್ರಕಾರ ಆರಂಭವಾಗಲೀ ಅಥವಾ ಅಂತ್ಯವಾಗಲೀ ಇರುವದಿಲ್ಲ; ಪ್ರತಿ ಸಂಗತಿಯು ವೃತ್ತಾಕಾರದಲ್ಲಿ ಚಲಿಸುತ್ತದೆ. ಸತ್ಯವೇದಕ್ಕೆ ಇದನ್ನು ಹೋಲಿಸುವದಾದರೆ ನಿರಾಶವಾದವಾಗಿದೆ. ಈ ಗ್ರಹಿಕೆಯನ್ನು ಓದಲು ಮಾಡಲು ಸಾಧ್ಯವಿಲ್ಲ. ಪಾಪಕ್ಕೆ ಮರಣಕ್ಕೆ ಸಂಕಟಕ್ಕೆ ಅಂತ್ಯವಿರುವದಿಲ್ಲ ಅದು ಚಕ್ರದಂತೆ ಪುನರಾವರ್ತಿಸುತ್ತದೆ. ವೇದ ಶಾಸ್ತ್ರದ ಪ್ರಕಾರದ ಸಮಯದಲ್ಲಿ ಪ್ರತಿಯೊಂದು ಸಂಗತಿಯು ಸಹ ದೇವರ ಅನ್ಯೋನ್ಯತೆಯ ಬಳಿಗೆ ಸಾಗುತ್ತಿರುತ್ತದೆ ಏಕೆಂದರೆ ಆತನೇ ನಮ್ಮ ನಿರ್ಮಾಣಿಕನು. ಅದರ ಅರ್ಥವೇನೆಂದರೆ ನಾವೆಲ್ಲರೂ ಈ ಓಡುತ್ತಿರುವ ಸಮಯದಲ್ಲಿ ಸೇರಿದವರಾಗಿ ಕ್ರಿಸ್ತನಿರುವ ನಿತ್ಯತ್ವದೆಡೆಗೆ, ಅಥವ ನಾಶನದ ಕಡೆಗೆ ಸಾಗುವವರಾಗಿದ್ದೇವೆ.

## ರಕ್ಷಣೆಗೆ ಒಡಂಬಡಿಕೆಯೇ ಉಗಮ ಸ್ಥಳವಾಗಿರುತ್ತದೆ

ಆದಿಕಾಂಡ 12ರಲ್ಲಿ ದೇವರು ಅಬ್ರಹಾಮನೊಂದಿಗೆ ಮಾತನಾಡಿ ಒಡಂಬಡಿಕೆ ಮಾಡಿಕೊಂಡನು. "ಒಡಂಬಡಿಕೆಯ" ವಾಗ್ದಾನದಿಂದ ಕೂಡಿ ಔಪಚಾರಿಕವಾದ ಒಪ್ಪಂದವಾಗಿರುತ್ತದೆ. ಮದುವೆಯ ಒಪ್ಪಂದದಲ್ಲಿ ಇಬ್ಬರು ಕೂಡಿ ಬಂದು ಒಡಂಬಡಿಕೆಯನ್ನು ಮಾಡಿಕೊಳ್ಳುವರು. ಹೇಗೂ, ಸತ್ಯವೇದದಲ್ಲಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ದೇವರೆ ಪ್ರಥಮವಾಗಿ ಮುಂದಾದನು, ಆತನೇ ಯಾವಾಗಲು ಅದರ ಕರಾರುಗಳನ್ನು ನೀಡುವನು, ಮತ್ತು ವಾಗ್ದಾನಗಳನ್ನು ಮಾಡುವನು. ಮನುಷ್ಯನು ಅದನ್ನು ಸರಳವಾದ ರೀತಿಯಲ್ಲಿ ಒಪ್ಪಿಕೊಳ್ಳುವದೇ ಅವನ ಪಾತ್ರವಾಗಿರುತ್ತದೆ. ದೇವರು ಒಡಬಡಿಕೆಯನ್ನು ಮಾಡಿಕೊಂಡಾಗ, ಅದನ್ನು "ಇಬ್ಬರು ಸಮಾನ ವ್ಯಕ್ತಿಗಳೊಂದಿಗೆ ಮಾಡಿಕೊಳ್ಳುವದಿಲ್ಲ," ಅಬ್ರಹಾಮನೊಂದಿಗೆ ಆತನು ಮಾಡಿಕೊಂಡ ಒಡಂಬಡಿಕೆಯಲ್ಲಿ, ದೇವರು ಅಬ್ರಹಾಮನಿಗೆ ವಾಗ್ದಾನವನ್ನು ನೀಡಿದಾಗ, ಆ ಒಡಂಬಡಿಕೆಯಲ್ಲಿರುವ ಕರಾರುಗಳನ್ನು ಅವನು ಒಪ್ಪುವ ಅಥವಾ ನಿರಾಕರಿಸುವ ನಿರ್ಧಾರವನ್ನು ಅವನೇ ಮಾಡಬೇಕಿತ್ತು.

ಈ ಒಡಂಬಡಿಕೆಯಲ್ಲಿ ಐದು ವಾಗ್ದಾನಗಳನ್ನು ನೀಡಲಾಗಿದೆ:

1. ದೇವರು ಅಬ್ರಹಾಮನಿಗೆ ಒಂದು ಪ್ರದೇಶವನ್ನು ನೀಡಿದನು (ಆದಿಕಾಂಡ 12:1). ಅಬ್ರಹಾಮನು ದೇವರಿಗೆ ವಿಧೇಯನಾಗಿ ಕಾನಾನ್ ದೇಶವನ್ನು ಸೇರಿದಾಗ ದೇವರು ಅವನೊಂದಿಗೆ ನಿರ್ಧಿಷ್ಟವಾಗಿ: "ನಾನು ಈ ದೇಶವನ್ನು ನಿನ್ನ ಸಂತಾನಕ್ಕೆ ಕೊಡುವೆನು" ಅಂದನು (ವಚನ 7).

2. ದೇವರು ಅಬ್ರಹಾಮನ ಕುಟುಂಬವನ್ನು ದೊಡ್ಡ ಜನಾಂಗವನ್ನಾಗಿ ಮಾಡುವೆನು ಅಂದನು (12:2ಎ). ಆದರೆ ಈ ಸಂದರ್ಭದಲ್ಲಿ ಅಬ್ರಹಾಮನಿಗೆ ತನ್ನದೇ ಆದ ಸಂತಾನವಿರಲಿಲ್ಲ (11:30).

3. ದೇವರು "ಅಬ್ರಹಾಮನ ಹೆಸರನ್ನು ಪ್ರಖ್ಯಾತಿಗೆ ತರುವೆನು" ಅಂದನು (ವಚನ 2) ಅಂದರೆ, ಅವನನ್ನು ಪ್ರಸಿದ್ಧಿ ಪಡಿಸುವೆನು ಎಂಬದೇ. ಈ ವಾಗ್ದಾನವು ಸತ್ಯವೇ ಆಯಿತು. ಅದೇ ರೀತಿಯಲ್ಲಿ ಅವನ ಹೆಸರು ಲೋಕದಲ್ಲಿ ಸರ್ವಕಾಲದಲ್ಲೂ ಪ್ರಖ್ಯಾತಿ ಪಡೆಯಿತು.

4. ದೇವರು ಅಬ್ರಹಾಮನನ್ನು ಸಂರಕ್ಷಿಸುವನು. "ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು" (12:3ಎ).

5. ಅಬ್ರಹಾಮನ ಮೂಲಕವಾಗಿ ಎಲ್ಲಾ ಕುಲದವರಿಗೂ ಆಶೀರ್ವಾದ ಉಂಟಾಗುವದು ಎಂದು ಹೇಳಿದನು (12:3).

ದೇವರು ತಿಳಿಸಿದ ಕಾರ್ಯದಲ್ಲಿ ಅಬ್ರಹಾಮನು ಸರಳವಾದ ಭರವಸವನ್ನಿಡುವದು ಮಾತ್ರ ಅವನ ಪಾತ್ರವಾಗಿತ್ತು. ವಚನ 1ರಲ್ಲಿ ಅಬ್ರಹಾಮಗಾದ ಮೂಲ ಸವಾಲನ್ನು ಗಮನಿಸುತ್ತೇವೆ: "ನೀನು ಸ್ವದೇಶವನ್ನು ಬಂಧು ಬಳಗವನ್ನು ತಂದೆಯ ಮನೆಯನ್ನು ಬಿಟ್ಟು

ನಾನು ತೋರಿಸುವ ದೇಶಕ್ಕೆ ಹೊರಟು ಹೋದನು" ಅವನು ತನ್ನ ದೇಶವನ್ನು ಮಾತ್ರವಲ್ಲದೆ ಅವನಿಗಿದ್ದ ಸಂಬಂಧಗಳನ್ನು ಸಹ ಕಡಿದುಕೊಳ್ಳಬೇಕಿತ್ತು (ಮುಂದೆ ಕಾಣುವಂತೆ ಅವರು ವಿಗ್ರಹಾರಾಧಕರಾಗಿದ್ದರು). ಇದನ್ನು ಮಾಡುವ ಮೂಲಕ ಅವನು ಪ್ರಾಪಂಚಿಕವಾದ ಒಳಿತನ್ನೂ ಸಂರಕ್ಷಣೆಯನ್ನೂ ಬಿಟ್ಟು ಹೋಗಬೇಕಾಯಿತು. ಅವನು ಹೋಗ ಬೇಕಾದ ಸ್ಥಳ ಯಾವದು? "ನಾನು ತೋರಿಸುವ ದೇಶ" ಇದನ್ನು ಹೊರತುಪಡಿಸಿ, ಅವನಿಗೆ ಮುಂದಿನ ನಕ್ಷೆಯನ್ನು ನೀಡಲಾಗಲಿಲ್ಲ. ಆದೇಶದ ಕುರಿತು ಅರಿಯಲು, ಅಬ್ರಹಮನು ದೇವರ ಮೇಲೆ ಭರವಸವಿಟ್ಟು, ಆತನು ತೋರಿಸಿದ ಮಾರ್ಗದಲ್ಲಿ ಹೋಗಬೇಕಾಯಿತು. 12:4ಎ ರಲ್ಲಿ, "ಯೆಹೋವನು ಹೇಳಿದ ಮೇರೆಗೆ ಅಬ್ರಾಹಾಮನು ಹೊರಟು ಹೋದನು" ಎಂಬುದಾಗಿದೆ.

ಸಕಲ ವಾಕ್ಯಗಳಲ್ಲೂ, ದೇವರು ತಾನು ಒಡಂಬಡಿಕೆ - ಮಾಡುವವನು ಮತ್ತು ತನ್ನ ಒಪ್ಪಂದಗಳನ್ನು ನೆರವೇರಿಸುವವನು ಎಂದು ನಿರೂಪಿಸಿದ್ದಾನೆ. ಅವುಗಳ ಕುರಿತಾಗಿ ಅನೇಕ ನಿದರ್ಶನಗಳನ್ನು ನೀಡಲಾಗಿದೆ, ಆದರೆ ಇಲ್ಲಿ ಕೆಲವನ್ನು ಮಾತ್ರ ತೋರಿಸಲಾಗಿದೆ. ಜಲ ಪ್ರಳಯ ಹಾಗು ಒಡಂಬಡಿಕೆಯ ಕುರಿತು ಮತ್ತು "ನೋಹನ ಕುಟುಂಬದ ರಕ್ಷಣೆಯ ಕುರಿತು ದೇವರು ಒಪ್ಪಂದವನ್ನು ಮಾಡಿಕೊಂಡಿದ್ದನು. ಆತನು ಜಲಪ್ರಳಯದಿಂದ ಪುನಃ ಭೂಮಂಡಲವನ್ನು ನಾಶ ಮಾಡುವದಿಲ್ಲವೆಂದು ವಾಗ್ದಾನ ಮಾಡಿದ್ದನು" (ಆದಿಕಾಂಡ 6:5-9:17). ನಂತರದಲ್ಲಿ, ಇಸ್ರಾಯೇಲ್ಯರು ಆತನ ಜನರಾಗುವದಕ್ಕೆ ಮನಸ್ಸು ಮಾಡುವದಾದರೆ, ತಾನು ಅವರಿಗೆ ದೇವರಾಗಿರುವೆನು ಎಂಬ ಒಡಂಬಡಿಕೆಯನ್ನು ದೇವರು ಸೀನಾಯಿ ಬೆಟ್ಟದಲ್ಲಿ ಮಾಡಿದನು. ದೇವರು ತಾನು ಮಾಡಿದ ಒಡಂಬಡಿಕೆಯನ್ನು ನೆರವೇರಿಸುವಲ್ಲಿ ಹಿಂಜರಿಯಲಿಲ್ಲ (ವಿಮೋಚನಕಾಂಡ 19; 20). ನಂತರ ದೇವರು ಯೇಸು ಕ್ರಿಸ್ತನ ಮೂಲಕ "ಹೊಸ ಒಡಂಬಡಿಕೆಯನ್ನು" ಜನರೊಂದಿಗೆ ಮಾಡಿಕೊಂಡನು. ಯೇಸು ಕ್ರಿಸ್ತನ ಶಿಲುಬೆಯ ಮೇಲಿನ ತ್ಯಾಗ ಮತ್ತು ಆತನ ಮೇಲೆ ಭರವಸವಿಡುವದರಿಂದ ಜನರಿಗೆ ನಿತ್ಯ ಜೀವದ ವಾಗ್ದಾನವನ್ನು ಮಾಡಿರುವನು (ಲೂಕ 22:20; ಇಬ್ರಿಯ 9:11-22). ಇದೇ ಯೇಸುವಿನ ನಿಕರವಾದ ಸುವಾರ್ತೆಯಾಗಿದೆ: ಇದರ ಮೂಲಕ ದೇವರು ಜನರನ್ನು ತನ್ನ ಒಡಂಬಡಿಕೆಯ ಅನ್ಯೋನ್ಯತೆಗೆ ಸೇರಿಸಿಕೊಂಡು, ತಾನು ನಮ್ಮನ್ನು ನಿರ್ಮಾಣಮಾಡಿರುವದರಿಂದ, ಆಶೀರ್ವಾದ ಪಾತ್ರರನ್ನಾಗಿ ಮಾಡಿದ್ದಾನೆ.

## ಅಬ್ರಹಾಮನ ಸಂತಾನದಿಂದಲೇ ರಕ್ಷಣೆಯು ದೊರಕುತ್ತದೆ

ಅಬ್ರಹಾಮನನ್ನು ದೇವರು "ದೊಡ್ಡ ಜನಾಂಗವನ್ನಾಗಿ" ಮಾಡುವೆನು ಎಂದು ಹೇಳಿದನು ಆದರೆ ಅದರಲ್ಲಿ ಒಂದು ಪ್ರಮುಖವಾದ ಸಮಸ್ಯೆಯು ಉದ್ಭವಿಸಿತ್ತು: ಅಬ್ರಹಾಮನು ಮುದುಕನಾಗಿ ಮಕ್ಕಳನ್ನು ಹೊಂದಿರಲಿಲ್ಲ. ಇದರ ನಿಮಿತ್ತವಾಗಿ ಅಬ್ರಹಾಮನು ದೇವರ ಒಡಂಬಡಿಕೆಯಲ್ಲಿ ಭರವಸವಿಡಲು ಗೊಂದಲ ಉಂಟಾಗಿತ್ತು ಆದಿಕಾಂಡ 15:1-6 ಈ ನಿರ್ದಿಷ್ಟವಾದ ವಾಗ್ದಾನವು ವಿಶೇಷ ದೃಷ್ಟಿಕೋನವನ್ನು ಹೊಂದಿತ್ತು. ಆದ್ದರಿಂದ ದೇವರು ಅಬ್ರಹಾಮನಿಗೆ, "ನಿನಗೋಸ್ಕರ ಅತ್ಯಧಿಕವಾದ ಬಹುಮಾನವು ಇಟ್ಟಿದೆ" ಎಂದು ಪುನಃ ಭರವಸ ನೀಡಿದನು (ವಚನ 1). ಆದರೆ ಅಬ್ರಹಾಮನ ಪ್ರತಿಕ್ರಿಯೆಯು, "ಹತಾಶೆಯಿಂದ, ಕರ್ತನಾದ ಯೆಹೋವನೆ ನನಗೆ ಏನು ಕೊಟ್ಟರೇನು? ನಾನು ಸಂತಾನವಿಲ್ಲದವನಾಗಿ ಹೋಗುವೆನಾದದರಿಂದ ನನ್ನ ಅಸ್ತಿಯೆಲ್ಲಾ ದಮಸ್ಕದ ಎಲೀಯೆಜರನ ಪಾಲಾಗುವದಲ್ಲಾ? ಅಂದನು." ನೀನು ನಗೆ ಸಂತಾನ ಕೊಡಲಿಲ್ಲವಾದ್ದರಿಂದ ನನ್ನ ಮನೆಯಲ್ಲಿ ಹುಟ್ಟಿದವನೇ ನನಗೆ ಭಾದ್ಯಸ್ತನಾಗಬೇಕಾಯಿತು ಎಂದನು (15:2, 3). ಅದಕ್ಕೆ ಯೆಹೋವನು ಇವನು ನಿನಗೆ ಭಾದ್ಯಸ್ಥನಾಗುವನು ಎಂದು ಹೇಳಿ ಅವನನ್ನು ಹೊರಗೆ ಕರೆತಂದು, ಆಕಾಶದ ಕಡೆಗೆ ನೋಡು ನಿನ್ನ ಸಂತಾನವನ್ನು ನಕ್ಷತ್ರಗಳಷ್ಟು ಮಾಡುವೆನು ಅಂದನು (15:4, 5). ಲೋಕವನ್ನು ಆಶೀರ್ವದಿಸಲು ನಿನ್ನ ಸಂತಾನದವರಲ್ಲಿ ಕೊರತೆಯನ್ನು ಉಂಟುಮಾಡುವದಿಲ್ಲ ಅಂದನು.

ಪುನಃ ಆಶೀರ್ವಾದವು ಒಬ್ಬ ಮನುಷ್ಯನಿಂದಲೇ ಬರುವದಿತ್ತು. ಗಲಾತ್ಯ 3:16ರಲ್ಲಿ ಪೌಲನು ಈ ಕುರಿತು ಬರೆದು, "ದೇವರು ಅಬ್ರಹಾಮನಿಗೂ ಅವನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ." ನಾಲ್ವತ್ತು ತಲೆಮಾರುಗಳ ನಂತರ, ಅಬ್ರಹಾಮನಿಗೆ ನೀಡಿದ ವಾಗ್ದಾನವನ್ನು ಯೇಸುವಿನಲ್ಲಿ ನೆರವೇರಿ ಸಲಾಯಿತು. ಆದ್ದರಿಂದ ಹೊಸ ಒಡಂಬಡಿಕೆಯು: "ಯೇಸು ಕ್ರಿಸ್ತನ ವಂಶಾವಳಿಯು, ಆತನು ದಾವೀದನ ವಂಶದವನು, ದಾವೀದನು ಅಬ್ರಹಾಮನ ವಂಶದವನು" ಎಂಬ ದಾಖಲೆಯಿಂದ ಆರಂಭಗೊಳ್ಳುತ್ತದೆ (ಮತ್ತಾಯ 1:1).

ವಿಶೇಷವಾಗಿ ಯೇಸುವಿನ ಮೂಲಕ ಲೋಕದ ಜನಾಂಗಗಳೆಲ್ಲಾ ಆಶೀರ್ವದಿಸಲ್ಪಡುವರು. ಇಸ್ರಾಯೇಲ್ಯರನ್ನು ಹೊರತುಪಡಿಸಿ ಹೊರಗೆ ಇರುವ ಜನಾಂಗಗಳಿಗೂ ಅಂದರೆ, ಲೋಕದ ಸಕಲ ಕುಟುಂಬಗಳಿಗೂ, ಆ ಆಶೀರ್ವಾದಗಳನ್ನು ತಲುಪಿಸಿದನು (ಆದಿಕಾಂಡ 12:3). ಆತನು ಈ ಲೋಕವನ್ನು ಬಿಟ್ಟು ಹೋಗುವಾಗ, ತನ್ನ ಶಿಷ್ಯರಿಗೆ ಈ ವಿಚಾರವನ್ನು ದೃಢೀಕರಿಸಿ "ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ" ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ಅಂದನು (ಮತ್ತಾಯ 28:19). ಅಬ್ರಹಾಮನಿಗೆ ಮಾಡಿದ ವಾಗ್ದಾನಗಳನ್ನು ಅವನ ಸಂತತಿಗೆ ಈಡೇರಿ ಸುವೆನು ಎಂದು ಹೇಳಿದ ಕಾರ್ಯವು ಇದೇ ಆಗಿರುತ್ತದೆ.

## ರಕ್ಷಣೆಯು ನಂಬಿಕೆಯನ್ನು ಅವಲಂಭಿಸಿರುತ್ತದೆ

ಆದಿಕಾಂಡ 12:1-4, ದೇವರು ತನ್ನ ವಾಗ್ದಾನವನ್ನು ನಂಬುವಂತೆ ಅಬ್ರಹಾಮನಿಗೆ ಸವಾಲನ್ನು ಹಾಕಿದನು, ದೇವರು ಅವನಿಗೆ ಈ ಯೋಜನೆಯ ಕುರಿತು ಯಾವುದೇ ನೀರಿಕ್ಷೆಯನ್ನು ನೀಡಲಿಲ್ಲ, ಮತ್ತು ಆ ಕಾನಾನ್ ದೇಶದ ಒಳಿತನ್ನಾಗಲೀ, ಸಮೃದ್ಧಿಯ ಕುರಿತಾಗಲೀ ಅವನಿಗೆ ಯಾವ ವಿವರಣೆಯನ್ನು ನೀಡಲಿಲ್ಲ, ಆದರೆ ದೇವರು ತನ್ನನ್ನು ಹಾಗೂ ತನ್ನ ವಾಕ್ಯವನ್ನು ಮಾತ್ರ ಅವನಿಗೆ ನೀಡಿದನು. ಅದೇ ವಿಧವಾಗಿ ಅವನಿಗೆ ಒಂದು ಮಗುವು ಜನಿಸುವದು ಎಂಬ ವಾಗ್ದಾನದಲ್ಲಿ, ವಯಸ್ಸಾದವನಿಗೆ ಮಗುವಾಗುವದು ಸಾಧ್ಯವೇ ಎಂಬ ಆತಂಕವು ಸಹ ಉಂಟಾಗಿತ್ತು. ಈ ರೀತಿ ಇರುವಾಗ ಅವನು ಜನಾಂಗಗಳಿಗೆ ಮೂಲ ಪಿತೃವಾಗವುದು ಅಸಾಧ್ಯವೇ ಆಗಿತ್ತು (ಇಬ್ರಿಯ 11:12; ರೋಮಾಪುರ 4:19). ಆದರೆ ಆದಿಕಾಂಡ 15:6 ರಲ್ಲಿ ಹೇಳುವದೇನೆಂದರೆ, "ಅಬ್ರಹಾಮನು ಕರ್ತನನ್ನು ನಂಬಿದನು." ತನ್ನ ಧೈಹಿಕವಾದ ಬಲಹೀನತೆಯ ನಡುವೆಯು ದೇವರು ಆತನ ವಾಗ್ದಾನಗಳನ್ನು ನೆರವೇರಿಸುವನು ಎಂಬ ಭರವಸದಲ್ಲಿದ್ದನು.

ನಂತರದಲ್ಲಿ ಅವನ ನಂಬಿಕೆಗೆ ಗಂಭೀರವಾದ ಪರೀಕ್ಷೆ ಉಂಟಾಯಿತು. ಆದಿಕಾಂಡ 22ರಲ್ಲಿ ಯಾವನಿಂದ ದೇವರ ವಾಗ್ದಾನವು ನೆರವೇರಿಸಬೇಕಿತ್ತೋ ಆ ಮಗನನ್ನೇ ಯಜ್ಞವನ್ನಾಗಿ ಸಮರ್ಪಿಸುವದಕ್ಕೆ ದೇವರು ಅಬ್ರಹಾಮನಿಗೆ ತಿಳಿಸಿದನು. ಒಂದು ವೇಳೆ ಅಬ್ರಹಾಮನು ಈ ಕಾರ್ಯವನ್ನು ಮಾಡುವಾಗ ದೇವರ ಮಧ್ಯಸ್ತಿಕೆ ಉಂಟಾಗಿರದಿದ್ದರೆ, ಅಬ್ರಹಾಮನು ಅದನ್ನು ನೆರವೇರಿಸುವ ಸಾಧ್ಯತೆಗಳಿದ್ದವು. ಆದರೆ ಅಬ್ರಹಾಮನು ಆ ಪರೀಕ್ಷೆಯಲ್ಲಿ ಯಶಸ್ಸನ್ನು ಸಾಧಿಸಿದ್ದನು. ಈಗ ಅವನ ನಂಬಿಕೆಯು ಶೇಕಡ ನೂರರಷ್ಟು ಸಾಬೀತಾಗಿತ್ತು. ತನ್ನ ಮಗನನ್ನು ಯಜ್ಞವನ್ನಾಗಿ ಸಮರ್ಪಿಸಲು ಅಬ್ರಹಾಮನು ಹೇಗೆ ಮುಂದುವರಿದನು ಎಂಬುದು ಆಶ್ಚರ್ಯ ಉಂಟುಮಾಡುತ್ತದೆ. ಮುಂದಿನ ಸಂತತಿಗೆ, ಅವನ ಈ ಸಂತತಿಯಿಂದಲೇ ಆಶೀರ್ವಾದವಾಗುವದು ಎಂದು ತಿಳಿದು, ಅವನನ್ನು ಯಜ್ಞಮಾಡುವದಕ್ಕೆ ಅವನು ನಿರಾಕರಿಸಿ, ಅವಿಧೇಯನಾಗಬಹುದಿತ್ತು? ಆದರೆ ಅವನು ಅದನ್ನು ಮಾಡಲಿಲ್ಲ ನಂತರದಲ್ಲಿ ವೇದವು ತಿಳಿಸುವದೇನೆಂದರೆ:

> ಅಬ್ರಹಾಮನು ಪರಿಶೋಧಿತನಾಗಿ ನಂಬಿಕೆಯಿಂದಲೇ ಇಸಾಕನನ್ನು ಸಮರ್ಪಿಸಿದನು. ಇಸಾಕನು ಅವನ ಏಕಪುತ್ರನಾಗಿದ್ದರೂ ಮತ್ತು ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರೆಂದು ದೇವರು ಅವನಿಗೆ ಹೇಳಿ ದ್ದರೂ ಆ ವಾಗ್ದಾನಗಳನ್ನು ಹೊಂದಿದ ಅವನು ಆ ಒಬ್ಬನೇ ಮಗನನ್ನು ಸಮರ್ಪಿಸುವದಕ್ಕಿದ್ದನು. *ತನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸ ಸಮರ್ಥನಾಗಿದ್ದಾನೆಂದು ತಿಳುಕೊಂಡನು.* ಮತ್ತು ಸತ್ತವರೊಳಗಿಂದಲೇ ಜೀವಿತನಾಗಿ ಬಂದವನಂತೆ ಅವನನ್ನು ಹೊಂದಿದನು (ಇಬ್ರಿಯ 11:17-19; ಒತ್ತಿ ಹೇಳಿದ್ದು ನನ್ನದು).

ತನ್ನ ಮಗನನ್ನು ಯಜ್ಞ ಮಾಡಲು, ಅಬ್ರಹಾಮನು ತನ್ನ ನಂಬಿಕೆಯನ್ನು ಯಾವ ರೀತಿಯಲ್ಲಿ ತರಬೇತಿ ಮಾಡಿರಬಹುದು? ಇಂಥಾ ಒಂದು ಬಲವಾದ ಭರವಸವುಳ್ಳವನಾಗಿ, ದೇವರು ಸತ್ತಂತ ಇಸಾಕನನ್ನು ಮರಣದಿಂದ ಎಬ್ಬಿಸಬಹುದೆಂದು ನಂಬಿದ್ದನು. ಅನೇಕ ಸಾರಿ ಅಬ್ರಹಾಮನು ತನ್ನ ನಂಬಿಕೆಯಲ್ಲಿ ಎಡವಿದ್ದಾಗ ತನಗೆ ವಾಗ್ದಾನವನ್ನು ನೀಡಿದ್ದ ದೇವರಲ್ಲಿ ಭರವಸವಿಟ್ಟು ಆತನ ಬಳಿಗೆ ಹಿಂದಿರುಗಿದ್ದನು. ಆದ್ದರಿಂದ ಪರಿಪೂರ್ಣವಾದ ನಂಬಿಕೆಯ ಕುರಿತು ಪೌಲನು ಅಬ್ರಹಾಮನ ನಿದರ್ಶನವನ್ನು ನೀಡಿರುವನು:

> ... ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪುರಾ ಭರವಸವಿಟ್ಟು ದೃಢ ನಂಬಿಕೆಯುಳ್ಳವನಾದನು. ಆದದರಿಂದ ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು. ಆದರೆ ಅದು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತೆಂಬದು ಅವನಿಗೋಸ್ಕರ ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವದು. ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರನ್ನು ನಂಬುವ ನಮಗೂ ನಂಬಿಕೆಯು ನೀತಿಯೆಂದು ಎಣಿಸಲ್ಪಡುವದು. ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು (ರೋಮಾಪುರ 4:20-25; ನೋಡಿರಿ ವಚನಗಳು 1-3, 11, 12).

## ಮುಕ್ತಾಯ

ದೇವರು ಅಬ್ರಹಾಮನನ್ನು ಸಂಧಿಸಿ, ಅವನೊಂದಿಗೆ ತನ್ನ ಪುರಾತನ ತತ್ವಗಳನ್ನು ನೀಡಿ, ರಕ್ಷಣೆಯ ಹಾದಿ ಹಾಗೂ ಅದರ ನೆರವೇರಿಕೆಯನ್ನು ಮುಂತಿಳಿಸಿದನು. ದೇವರು ಅವನೊಂದಿಗೆ ಮಾಡಿಕೊಂಡ ವಾಗ್ದಾನಗಳ ನೆರವೇರಿಕೆಯನ್ನು ನಾವುಗಳು ಈಗಲೂ ಸಹ ವೀಕ್ಷಿಸಬಹುದು: ಅದನ್ನು ಯೇಸುವನ್ನು ಕಳಿಹಿಸುವದರ ಮೂಲಕ, ಲೋಕದ ಪಾಪಕ್ಕಾಗಿ ಸಾಯುವ, ಹಾಗೂ ಆತನ ಪುನರುತ್ಥಾನದ ಮೂಲಕ ನಿರೂಪಿಸಲಾಗಿದೆ. ದೇವರು ಆ ದಿನದಲ್ಲಿ ಅಬ್ರಹಾಮನೊಂದಿಗೆ ಮಾತನಾಡಿದ್ದರೂ, ಅವುಗಳು ಈ ದಿವಸಗಳಲ್ಲೂ, ಅದೇ ವಿಧವಾದ ಸದ್ಗುಣಗಳನ್ನು ಹೊಂದಿರುತ್ತದೆ: ದೇವರ ವಿವೇಕವುಳ್ಳ ಯೋಜನೆಯ ನಿಮಿತ್ತ ರಕ್ಷಣೆಯು ನಮಗೆ ಅನುಗ್ರಹ ಮಾಡಲಾಗಿದೆ. ಅದು ಅಬ್ರಹಾಮನೊಂದಿಗೆ ಒಡಂಬಡಿಕೆಯ ಮೂಲಕ ಮಾಡಲ್ಪಟ್ಟ ವಾಗ್ದಾನಗಳಿಗಿಂತ ಅತಿ ಉತ್ಕೃಷ್ಟವಾಗಿರುತ್ತದೆ (ಇಬ್ರಿಯ 8:6, 7; 9:15 ನೋಡಿರಿ). "ಅಬ್ರಹಾಮನ ಸಂತತಿಯಾದ ಯೇಸುವಿನ ಮುಖಾಂತರ ನಮಗೆ ರಕ್ಷಣೆಯ ಅನುಗ್ರಹವಾಗಿದೆ." ಅದನ್ನು ನಾವು ಅಂಗೀಕರಿಸುವದಾದರೆ, ಅದರ ಯಶಸ್ಸಿನ ಪ್ರಾಪ್ತಿ ಉಂಟಾಗುತ್ತದೆ. ನಂಬಿಕೆಯಿಂದ, ದೇವರಲ್ಲಿ ಭರವಸುವುಳ್ಳವರಾಗೋಣ, ಆತನ ವಾಕ್ಯಕ್ಕೆ ವಿಧೇಯರಾಗುವ ಮೂಲಕ ನಮ್ಮ ಜೀವಿತಗಳನ್ನು ಆತನ ಕೈಗೆ ಸಮರ್ಪಿಸೋಣ.

## ಹೊಸ ಒಡಂಬಡಿಕೆಯಲ್ಲಿನ ಅಬ್ರಹಾಮನು

ಅಬ್ರಹಾಮನ ಮುಖಾಂತರ ಲೋಕದ ರಕ್ಷಣೆಯ ವಿಚಾರವನ್ನು ಹಳೆ ಒಡಂಬಡಿಕೆಯಲ್ಲಿ ಮಾತ್ರ ವ್ಯಾಖ್ಯಾನಿಸಲಾಗದೆ ಹೊಸ ಒಡಂಬಡಿಕೆಯಲ್ಲಿಯೂ ಮೂವತ್ತೊಂಬತ್ತು ಸಾರಿ ಉಲ್ಲೇಖಿಸಲಾಗಿದೆ. ಅಬ್ರಹಾಮನ ವಿವಿಧ ಕಾರ್ಯಗಳನ್ನು ಹೊಸ ಒಡಂಬಡಿಕೆಯಲ್ಲಿ ನಮೂದಿಸಲಾಗಿದೆ.

1. ಹಳೆಯ ಹಾಗೂ ಹೊಸ ಒಡಂಬಡಿಕೆಯಲ್ಲಿನ ದೇವರ ಸಂಬಂಧವನ್ನು ಮುಂದುವರಿಸಲಾಗಿದೆ. ಹಳೆಯ ಒಡಂಬಡಕೆಯಲ್ಲಿರುವಂತೆ, ಹೊಸ ಒಡಂಬಡಿಕೆಯಲ್ಲಿ, "ಅಬ್ರಹಾಮ, ಇಸಾಕನ ಮತ್ತು ಯಾಕೋಬನ" ದೇವರು ಎಂದು ದಾಖಲಿಸಲಾಗಿದೆ (ಅಪೊಸ್ತಲರ ಕೃತ್ಯಗಳು 3:13; ಮತ್ತಾಯ 22:32; ಲೂಕ 1:55).

2. ದೇವರ ನಂಬಿಗಸ್ತಿಕೆಯನ್ನು ತೋರ್ಪಡಿಸಲು, ಅಬ್ರಹಾಮನ ವಾಗ್ದಾನಗಳನ್ನು ದೇವರು ನೆರವೇರಿಸಿದಂತೆ, ಅದನ್ನು ದೇವರು ಈ ದಿನಗಳಲ್ಲೂ ಮಾಡುತ್ತಾನೆ (ಲೂಕ 1:73; ಅಪೊಸ್ತಲರ ಕೃತ್ಯಗಳು 3:25, 26; ಇಬ್ರಿಯ 6:13).

3. "ಯೇಸು" ಅಬ್ರಹಾಮನ ಸಂತತಿ ಎಂದು, ದೇವರು ತನ್ನ ಯೋಜನೆಗಳನ್ನು ಇಸ್ರಾಯೇಲ್ಯರಿಗೂ ಹಾಗೂ ಇತರೆ ಜನಾಂಗಗಳಿಗೂ ತಿಳಿಸಲು (ಮತ್ತಾಯ 1:1; ಗಲಾತ್ಯ 3:14-16).

4. ರಕ್ಷಣೆಯು ಒಳ್ಳೇಯ ಕ್ರಿಯೆಗಳಿಂದುಂಟಾಗದೇ ದೇವರ ವರವಾದ ನಂಬಿಕೆಯಿಂದಲೇ ಎಂದು ತಿಳಿಸಲು (ರೋಮಾಪುರ 4; ಗಲಾತ್ಯ 3:14-29).

5. ನಂಬಿಕೆಯನ್ನು ಬೋಧಿಸಲು, ವಂಶಕ್ರಮದಿಂದಲ್ಲ ಎಂದು ತಿಳಿಸಲು, ನಂಬಿಕೆಯಿಂದಲೇ ಅಬ್ರಹಾಮನ ಸಂತತಿ ಆಗುವರು ಎಂದು ತಿಳಿಸಲಾಗಿದೆ (ಯೋಹಾನ 8:33-45; ರೋಮಾಪುರ 9:7).

6. ದೇವರ ವಾಗ್ದಾನಗಳಲ್ಲಿಯೇ ಭರವಸವಿಡುವಂತೆ, ಅದು ನಂಬಿಕೆಗೆ ಮೂಲವಾಗಿದೆ, ನಂಬಿಕೆಯ ಸತ್ಯ ಸ್ವಭಾವವನ್ನು ತಿಳಿಸಲು (ಇಬ್ರಿಯ 11:8-12, 17-19; ಯಾಕೋಬ 2:21-23; ಮತ್ತಾಯ 3:9).

7. ಪರಲೋಕ ಆನಂದವನ್ನು ತೋರ್ಪಡಿಸಲು, ಅಲ್ಲಿ ವಿಶ್ವಾಸಿಗಳು ಅಬ್ರಹಾಮ ಮತ್ತು ಇತರೆ ದೇವ ಜನರೊಂದಿಗೆ ಇರುವಂಥ ಸಂಭ್ರಮ (ಮತ್ತಾಯ 8:11; ಲೂಕ 13:28; 16:22, 23).